ಸಿರಿರಮಣ ತವ ಚರಣ ದೊರಕುವುದು ಹ್ಯಾಂಗಿನ್ನು
ಪರಮ ಪಾಪಿಷ್ಠ ನಾನು । ಪ ।
ನರಹರಿಯೆ ನಿನ್ನ ನಾಮಸ್ಮರಣೆ ಮಾಡದೆ ।
ನರಕಕ್ಕೆ ಗುರಿಯಾದೆನೋ । ಹರಿಯೇ । । ಅ.ಪ ।

ಕೆರೆ ಭಾವಿ ದೇವ ಮಂದಿರಗಳನು ಕೆಡವಿ ನಾ ಹಿರಿದಾಗಿ ಮನೆ ಕಟ್ಟಿದೆ ।
ನೆರೆನಡೆವ ಮಾರ್ಗದಾ ಅರವಟ್ಟಿಗೆಗಳನು ಥರಥರದಿ ಬಿಚ್ಚಿ ತೆಗೆದೆ ।
ಪರಮ ಸಂಭ್ರಮದಿಂದ ಅರಳೆಯಮರ ಕಡಿಸೆ ಕೊರೆಸಿ ಬಾಗಿಲ ಮಾಡಿದೆ ।
ವರಮಂದಿರವ ಮುಗಿಸಿ ಹರುಷ ಚಿತ್ರವ ತೆಗೆಸಿ ಪರಿಪರಿಯ ಸೌಖ್ಯ ಸುರಿದೆ।
ಮೆರೆದೆ । ೧ ।

ಹೊಸ ಮನೆಯ ಕಂಡು ಬಲು ಹಸಿದು ಭೂಸುರರು   ಬರೆ ಕೊಸರಿ
ಹಾಕುತ ದಬ್ಬುತಾ ।
ಶಶಿಮುಖಿಯೇ ಬಾರೆಂದು ಅಸುವನೆ ಬಣ್ಣಿಸುತ ಹಸನಾಗಿ
ಅವಳೊಲಿಯುತ।
ದಶಮಿ ಏಕಾದಶಿ ದ್ವಾದಶಿ ದಿನತ್ರಯದಿ ಅಶನವೆರಡು ಹೊತ್ತುಣ್ಣುತಾ ।
ಘಸಘಸನೆ ತಾಂಬೂಲ ಪಶುವಿನಂದದಿ ಮೆದ್ದು ಕುಸುಮಗಂಧಿಯ
ರಮಿಸುತಾ । ಸತತಾ । ೨ ।

ಸ್ನಾನ ಸಂಧ್ಯಾನ ಅತಿಮೌನ ಗಾಯತ್ರಿಜಪ ಭಾನುಗರ್ಘ್ಯವನು ಕೊಡದೆ ।
ಶ್ರೀನಿವಾಸನೆ ನಿನ್ನ ಜ್ಞಾನಪೂರ್ವಕ ಪೂಜೆ ನಾನೊಂದು ಕ್ಷಣ ಮಾಡದೆ ।
ಬೇನೆ ಬಂದಂತಾಗಿ ಹೀನ ಸಕೇಶಿಯ ಕೈಲಿ ನಾನಾ ವಿಧಾನ್ನ ಉಂಡೆ ।

ಜೀನತ್ವದಲಿ ದುಡ್ಡು ದಾನ ಧರ್ಮವ ಕೊಡದೆ ಶ್ವಾನನಂದದಿ ಚರಿಸಿದೆ ।
ಬರಿದೆ । ೩ ।

ಸಾಕಲ್ಯದಿಂದ ಶಾಲಿಗ್ರಾಮದಭಿಷೇಕ ಆಕಳ್ಹಾಲಲಿ ಮಾಡದೆ ।
ನಾಕೆಂಟು ನಾಯಿಗಳ ಸಾಕಿ ಮನೆಯೊಳು ಬದುಕಬೇಕೆಂದು
ಹಾಲು ಹೊಯ್ದೆ।
ಕಾಕುಬುದ್ಧಿಗಳಿಂದ ಗುಡಗುಡಿ ನಶ್ಯಪುಡಿ ಹಾಕಿ ಭಂಗಿಯ ಸೇದಿದೆ ।
ಲೋಕನಿಂದಕನಾಗಿ ಪಾತಕವನೆಚ್ಚಿ ಅನೇಕ ಜೂಜುಗಳಾಡಿದೆ ।ಹರಿಯೇ ।೪।

ಉತ್ತಮ ಬ್ರಾಹ್ಮಣರ ವೃತ್ತಿಯನೆ ಕೆಡೆಸಿ ಬ್ರಹ್ಮತ್ಯಗಾರನೆನಿಸಿದೆ ।
ಮತ್ತೇ ಮುಂಜೀ ಮದುವೆ ಮನೆಯೊಳಗೆ ನಾ ಪೋಗಿ
ಸತ್ತ ಸುದ್ದಿಯ ಪೇಳಿದೆ ।
ವಿತ್ತವಿದ್ದವರ ಬೆನ್ಹತ್ತಿ ದೂತರ ಕಳುಹಿ ಕುತ್ತಿಗೆಯ ನಾ ಕೊಯಿಸಿದೆ ।
ಹತ್ತುಜನ ಎನ್ದೆಣಿಕೆ ನಿತ್ಯ ಕಲ್ಹೊಡೆಯುತಿರೆ ಮೃತ್ಯುದೇವತೆ ಎನಿಸಿದೆ
।ಬಿಡದೇ ।೫।

ಬಾದರಾಯಣ ಕೃತ ಭಾಗವತ ಕೇಳ್ವಲ್ಲಿ ಆದರವು ಪುಟ್ಟಲಿಲ್ಲ ।
ವಾದಿಗಳ ಮತವಳಿದು ಮಧ್ವಸಿದ್ಧಾಂತದ ಹಾದಿಗೇ ಪೋಗಲಿಲ್ಲ ।
ಶೋಧಿಸಿದ ಚಿನ್ನಕ್ಕೆ ಸಮರಾದ ವೈಷ್ಣವರ ಪಾದಕ್ಕೆ ಬೀಳಲಿಲ್ಲ ।
ವೇದ ಬಾಹಿರನಾಗಿ ಅಪಸವ್ಯಮನನಾಗಿ ಓದಿಕೊಂಡೆನೊ ಇದೆಲ್ಲ।ಸುಳ್ಳಾ।೬।

ಕ್ಷಿತಿಯೊಳಗೆ ಇನ್ನಾರು ಹಿತವ ಬಯಸುವರೆನಗೆ

ಗತಿಯೇನು ಪೇಳೋ ಕೊನೆಗೆ ।

ಸತತ ತವ ಧ್ಯಾನದಲಿ ರತನಾಗಿ ಇರುವ ಸನ್ಮತಿಯನೆ ಪಾಲಿಸೀಗ ।

ಪತಿತ ಪಾವನನೆಂಬೊ ಬಿರುದು ಅವನಿಯ ಮೇಲೆ

ಶೃತಿ ಸಾರುತಿದೆಯೊ ಹೀಗೆ ।

ಶಿತಿಕಂಠನುತ ಜಗನ್ನಾಥವಿಠಲ ನಿನ್ನ ತುತಿಸಿ ಮೊರೆಹೊಕ್ಕೆ ಹರಿಯೇ।

ದೊರೆಯೇ । ೭ ।

सिरिरमण तव चरण दॊरकुवुदु ह्यांगिन्नु परम पापिष्ठ नानु । प ।
नरहरियॆ निन्न नामस्मरणॆ माडदॆ ।
नरकक्कॆ गुरियादॆनो । हरियॆ । । अ.प ।

कॆरॆ भावि देव मंदिरगळनु कॆडवि ना हिरिदागि मनॆ कट्टिदॆ ।
नॆरॆनडॆव मार्गदा अरवट्टिगॆगळनु थरथरदि बिच्चि तॆगॆदॆ ।
परम संभ्रमदिंद अरळॆय मर कडिसॆ कॊरॆसि बागिल माडिदॆ ।
वर मंदिरव मुगिसि हरुष चिन्नव तॆगॆसि परिपरिय सौख्य सुरिदॆ । मॆरॆदॆ । १ ।

हॊस मनॆय कंडु बलु हसिदु भूसुररु बरॆ कॊसरि हाकुत दब्बुता ।
शशिमुखियॆ बारॆंदु असुवनॆ बण्णिसुत हसनागि अवळॊलियुत ।
दशमि एकादशि द्वादशि दिनत्रयदि अशनवॆरडु हॊत्तुण्णुता ।
घसघसनॆ तांबूल पशुविनंददि मॆद्दु कुसुमगंधिय रमिसुता । सतता । २ ।

स्नान संध्यान अतिमौन गायत्रिजप भानुगर्घ्यवनु कॊडदॆ ।
श्रीनिवासनॆ निन्न ज्ञानपूर्वक पूजॆ नानॊंदु क्षण माडदॆ ।
बेनॆ बंदंतागि हीन सकेशिय कैलि नाना विधान्न उंडॆ ।
जीनत्वदलि दुड्डु दान धर्मव कॊडदॆ श्वाननंददि चरिसिदॆ । बरिदॆ । ३ ।

साकल्यदिंद शालिग्रामदभिषेक आकळ्हाललि माडदॆ ।
नाकॆंटु नायिगळ साकि मनॆयॊळु बदुकबेकॆंदु हालु हॊय्दॆ ।
काकुबुद्धिगळिंद गुडगुडि नश्यपुडि हाकि भंगिय सेदिदॆ ।
लोकनिंदकनागि पातकवनॆच्चि अनेक जूजुगळाडिदॆ ।हरियॆ । ४ ।

उत्तम ब्राह्मणर वृत्तियनॆ कॆडॆसि ब्रह्म हत्यगारनॆनिसिदॆ ।
मत्ते मुंजी मदुवॆ मनॆयॊळगॆ ना पोगि सत्त सुद्दिय पेळॆदॆ ।
वित्तविद्दवर बॆन्हत्ति दूतर कळुहि कुत्तिगॆय ना कॊयिसिदॆ ।
हत्तु जन ऐन्हॆणकॆ नित्य कल्हॊडॆयुतिरॆ मृत्युदेवतॆ ऎनिसिदॆ । बिडदे । ५ ।

बादरायण कृत भागवत केळवल्लि आदरवु पुट्टलिल्ल ।
वादिगळ मतवळिदु मध्वसिद्धांतद हादिगॆ पोगलिल्ल ।
शोधिसिद चिन्नक्के समराद वैष्णवर पादक्के बीळलिल्ल ।
वेद बाहिरनागि अपसव्यमननागि ओदिकॊंडॆनॊ इदॆल्ल । सुळ्ळा । ६ ।

क्षितियॊळगॆ इन्नारु हितव बयसुवरॆनगॆ गतियेनु पेळो कॊनॆगॆ ।
सतत तव ध्यानदलि रतनागि इरुव सन्मतियनॆ पालिसीग ।
पतित पावननॆंबॊ बिरुदु अवनिय मेलॆ शृतिसारुतिदॆयॊ हीगॆ ।
शितिकंठनुत जगन्नाथविठल निन्न तुतिसि मॊरॆहॊक्कॆ हरियॆ । दॊरॆये । ७ ।